**<u>ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ವಿರಾಜಪೇಟೆ.</u>**

**<u>ಕ್ರಿ.ಮೊ.ಸಂಖ್ಯೆ: 651/2023</u>**

**ಫಿರ್ಯಾದಿ : ರಾಜ್ಯ ಸರ್ಕಾರ**
**ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿಗಳು** ಆ-1 ಮುದ್ದು ಸೋಮಯ್ಯ ತಂದೆ: ಭೀಮಯ್ಯ , ಪ್ರಾಯ 38 ವರ್ಷ, ತೋರ - ಕೆದಮುಳ್ಳೂರು ಗ್ರಾಮ, **ವಿರಾಜಪೇಟೆ ತಾಲ್ಲೂಕು.**

ಆ-2 ಕೆ.ಎನ್. ಪೊನ್ನಪ್ಪ ಅಲಿಯಾಸ್ ಸುನೀಲ್, ತಂದೆ:ನಾಣಯ್ಯ, ಪ್ರಾಯ 23 ವರ್ಷ, ಭಾಗಮಂಡಲ ಹೋಬಳಿ, ಸಣ್ಣಪುಲಿಕೋಟು ಅಯ್ಯಂಗೇರಿ ಗ್ರಾಮ, ಮಡಿಕೇರಿ ತಾಲ್ಲೂಕು.

ಆ-3 ಕರಿನೆರಮಂಡ ಮೇದಪ್ಪ ಅಲಿಯಸ್ ಹರೀಶ್ ತಂದೆ: ಉತ್ತಪ್ಪ, ಪ್ರಾಯ 51 ವರ್ಷ, ಪಾಲಂಗಾಲ ಗ್ರಾಮ, ವಿರಾಜಪೇಟೆ ಹೋಬಳಿ, ವಿರಾಜಪೇಟೆ ತಾಲ್ಲೂಕು.

## <u>ದೋಷಾರೋಪಣೆ</u>

ಪ್ರದೀಪ ಪೋತದಾರ, **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾ.ದಂ. ಆದ ನಾನು ಈ ಮೇಲಿನ ಆರೋಪಿಗಳಾದ** ನಿಮ್ಮ ಮೇಲೆ **ಹೊರಿಸಲಾದ ದೋಷಾರೋಪಣೆ ಏನೆಂದರೆ,**

ದಿನಾಂಕ: **29-04-2021** ರಂದು ವಿರಾಜಪೇಟೆ ವಲಯದ ವಲಯ ಅರಣ್ಯಾಧಿಕಾರಿಯವರಿಗೆ ಬಂದಂತಹ ಖಚಿತ ಮಾಹಿತಿ ಮೇರೆಗೆ ಹೆಗ್ಗಳ

ಶಾಖೆಯ ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಇಲಾಖಾ ವಾಹನ ಸಂಃಕೆಎ-**12**-ಜಿ-**708** ರಲ್ಲಿ ವಿರಾಜಪೇಟೆ ತಾಲ್ಲೂಕು, ಹೆಗ್ಗಳ ಶಾಖೆಯ, ಪಾಲಂಗಾಲ ಗ್ರಾಮದ ಶ್ರೀ ಕುಲ್ಲಚಂಡ ಗಣೇಶ್ ರವರ ಕಾಫಿ ತೋಟ ಎನ್ನಲಾದ ಜಾಗದ ಲೈನ್ ಮನೆಯಲ್ಲಿ ಕಾಡುಪ್ರಾಣಿ ಬೇಟೆಯಾಡಿ ಮಾಂಸ ಮಾಡಿರುತ್ತಾರೆ ಎಂಬ ಗುಮಾನಿ ಮೇರೆಗೆ, ಹೆಗ್ಗಳ ಶಾಖೆಯ ಸಿಬ್ಬಂದಿಗಳು ಹೋಗಿ ನೋಡಲಾಗಿ, ಸದರಿ ಇಲಾಖೆಯವರನ್ನು ನೋಡಿ **1** ನೇ ಆರೋಪಿಯಾದ ನೀವು ಓಡಿ ಹೋಗಿರುತ್ತೀರಿ. ಓಡಿ ಹೋದ **1** ನೇ ಆರೋಪಿಯಾದ ನಿಮ್ಮನ್ನು ಇಲಾಖಾ ಸಿಬ್ಬಂದಿಗಳು ಗುರುತು ಹಿಡಿದಿರುತ್ತಾರೆ. **2** ನೇ ಆರೋಪಿಯಾದ ನಿಮ್ಮನ್ನು ಸಿಬ್ಬಂದಿಗಳು ಮನೆಯಲ್ಲಿ ಎಬ್ಬಿಸಿ ವಿಚಾರಿಸಿದಾಗ, ನಿಮ್ಮ ಹೆಸರು, ವಿಳಾಸವನ್ನು ತಿಳಿಸಿರುತ್ತೀರಿ. ಬೇಟೆಯಾಡಿದ ಬಗ್ಗೆ ವಿಚಾರಿಸಿದಾಗ **2** ನೇ ಆರೋಪಿಯಾದ ನೀವು ನಿಮ್ಮ ಭಾವನಾದ **3** ನೇ ಆರೋಪಿಯಿಂದ  ಕೋವಿಯನ್ನು ಪಡೆದುಕೊಂಡು ಕಾಡಿಗೆ ಹೋಗಿ ಒಂದು ದೊಡ್ಡಳಿಲನ್ನು ಕೋವಿಯಿಂದ ಹೊಡೆದು ಸಾಯಿಸಿದ್ದು, ನಂತರ ಚರ್ಮ ಹಾಗೂ ಮಾಂಸವನ್ನು ಅವರ ಲೈನ್ ಮನೆಯ ಪಕ್ಕದ ನೀರಿನ ತೋಡಿನಲ್ಲಿ ಶುಚಿಗೊಳಿಸಿ ಲೈನ್ ಮನೆಗೆ ತಂದು ಮಾಂಸ ಮಾಡಿ ಭಕ್ಷಿಸಿರುತ್ತೀರಿ. ಸದರಿ ಲೈನ್ ಮನೆಯಲ್ಲಿ ದೊಡ್ಡಳಿಲು ಮಾಂಸ ಮಾಡಿದ್ದು ಪ್ರಾಥಮಿಕ ತನಿಖೆಯಿಂದ ಸಾಬೀತಾಗಿದ್ದು, ಲೈನ್ ಮನೆಯ ಪಕ್ಕದಲ್ಲೇ ಇರುವ ತೋಡಿನಲ್ಲಿ ಸ್ವಚ್ಛಗೊಳಿಸಿರುವ ಕುರುಹುಗಳು ಮತ್ತು ಚರ್ಮ ದೊರೆತಿರುತ್ತದೆ. ಸದರಿ ಚರ್ಮವನ್ನು ಹಾಗೂ ಮಾಂಸ ಮಾಡಲು ಬಳಸಿದ್ದ ಎರಡು ಚಿಕ್ಕ ಕತ್ತಿಗಳನ್ನು, ಗುಂಡು ಹಾರಿಸಿದ ಒಂದು ತೋಟ (ಕಾಟ್ರೇಜ್) ಮತ್ತು ಬೇಟೆಯಾಡಲು ಬಳಸಿದ್ದ ಒಂದು ಹೆಡ್ ಲೈಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. **ಆ ಮೂಲಕ** ಆರೋಪಿಗಳಾದ ನೀವುಗಳು ವನ್ಯಜೀವಿ (ರಕ್ಷಣಾ)  ಕಾಯ್ದೆ-**1972** ರ ಕಲಂ **2, 9, 39, 40, 50** ಮತ್ತು **51** ರ ಉಲ್ಲಂಘನೆ ಹಾಗೂ ಕರ್ನಾಟಕ ಅರಣ್ಯ ಕಾಯ್ದೆ-**1963** ಕಲಂ **24**(ಜೆ)

ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

**ಪ್ರಶ್ನೆ 1 ಃ ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ ?**

**ಉತ್ತರ ಃ** Yes

**ಪ್ರಶ್ನೆ 2ಃ ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೇ ?**

**ಉತ್ತರ ಃ** Charge is framed, read over to accused No.1 to 3 in Kannada language. Accused persons pleaded not guilty and claimed to be tried.

**ಈ ಮೇಲಿನ ದೋಷಾರೋಪಣೆಯ ವಿಚಾರಣೆಯು ಈ ನ್ಯಾಯಾಲಯದಲ್ಲಿ ನಡೆಯತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.**

**ವಿರಾಜಪೇಟೆ**

**ದಿಃ17-02-2024**

sd/-

**ಪ್ರದೀಪ ಪೋತದಾರ**

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**

**ವಿರಾಜಪೇಟೆ.**